

## ಪೀಡಿತ ಪತಿ

ಪತ್ನಿಯರಿಂದ ಪೀಡಿತ ಗಂಡಂದಿರ ಒಂದು ಸಭೆ ನಡೆಯುತಿತ್ತು.

ಸಂಘದ ಮುಖ್ಯಸ್ಥ: ಇಲ್ಲಿ ಹೆಂಡ್ತಿಯರಿಂದ ಹೊಡೆಸಿಕೊಂಡು ಬಂದವರು ಮೊದಲು ನಿಮ್ಮ ಕೈಯನ್ನು ಮೇಲೆ ಎತ್ತಿ.

ಅದರಲ್ಲಿ ಒಬ್ಬನನ್ನು ಬಿಟ್ಟು, ಉಳಿದವರು ಕೈಯನ್ನು ಮೇಲೆ ಎತ್ತಿದರು.

ಸಂಘದ ಮುಖ್ಯಸ್ಥ: ಹಾಗಾದರೆ, ನೀನು ಹೆಂಡ್ತಿಯಿಂದ ಹೊಡೆಸಿಕೊಂಡು ಬಂದಿಲ್ಲವೆ?

ಪೀಡಿತ ಪತಿ: ಎಷ್ಟು ಹೊಡೆದಿದ್ದಾಳೆಂದರೆ ಕೈ ಮುರಿದೇ ಹೋಗಿದೆ, ಎತ್ತಲು ಆಗುತ್ತಿಲ್ಲ!

★★★

## ಚಹಾ

ಮಗ: ಅಪ್ಪಾ, ನಾನು ಮಗುವಾಗಿದ್ದಾಗ ನೀವು ನನ್ನನ್ನು ಪಕ್ಕದಲ್ಲಿ ಮಲಗಿಸಿಕೊಳ್ಳುತ್ತಿದ್ದೀರಿ. ಆದರೆ ಈಗೇಕೆ ಇಲ್ಲ?

ಅಪ್ಪಾ: ನೀನು ಮಗುವಿದ್ದಾಗ ಹಾಲು ಕುಡಿಯುತ್ತಿದ್ದುದರಿಂದ ನಮ್ಮ ಪಕ್ಕದಲ್ಲಿ ಮಲಗಿಸಿಕೊಳ್ಳುತ್ತಿದ್ದೆವು. ಆದರೆ ಈಗ ನೀನು ಚಹಾ ಕುಡಿಯುತ್ತಿರುವುದರಿಂದ ಬೇರೆ ಕಡೆಗೆ ಮಲಗಿಸುತ್ತೇವೆ.

ಮಗ: ಹಾಗಾದ್ರೆ ಅಮ್ಮನೂ ಚಹಾ ಕುಡಿತಾಳಲಪ್ಪಾ?

ಸಂಗ್ರಹ: ಮಾಲತೇಶ ಶಾಂ ಪಾಟೀಲ



## ಫೋಟೊ ಕಾಪಿ

ಒಂದು ಕಚೇರಿಯಲ್ಲಿ ಹಳೆ ಕಡತಗಳನ್ನು ಇಟ್ಟುಕೊಳ್ಳಲು ಸ್ಥಳದ ಅಭಾವವಾಯಿತು. ಅವುಗಳನ್ನು ವಿಲೇವಾರಿ ಮಾಡಬಹುದೇ ಎಂದು ಕೇಳಿ ಮೇಲಿನ ಕಚೇರಿಗೆ ಪತ್ರ ಬರೆದರು.

ಅಲ್ಲಿಂದ ಉತ್ತರ ಬಂತು 'ನಿಮ್ಮ ಕೋರಿಕೆಯ ಮೇರೆಗೆ ಹಳೆಯ ಕಡತಗಳನ್ನು ವಿಲೇವಾರಿ ಮಾಡಲು ಅನುಮತಿ ನೀಡಲಾಗಿದೆ. ಆದರೆ ಮುಂಜಾಗರೂಕತಾ ಕ್ರಮವಾಗಿ ಅವುಗಳ ಫೋಟೊ ಪ್ರತಿಗಳನ್ನು ಮಾಡಿಸಿ ಇರಿಸಿಕೊಳ್ಳತಕ್ಕದ್ದು.

★★★




## ಎಚ್ಚರಿಕೆ!

ಕಾಲೇಜಿನ ಆವರಣದಲ್ಲಿ ಸಂಚಾರಿ ಸೂಚನಾ ಫಲಕವೊಂದನ್ನು ಅಳವಡಿಸಲು ವಿದ್ಯಾರ್ಥಿಯೊಬ್ಬನಿಗೆ ತಿಳಿಸಲಾಯಿತು. ಅವನು ಬರೆಸಿದ ಬೋರ್ಡ್ ಹೀಗಿತ್ತು. 'ನಿಧಾನವಾಗಿ ಚಲಿಸಿ, ವಿದ್ಯಾರ್ಥಿಗಳನ್ನು ಸಾಯಿಸಬೇಡಿ, ಉಪನ್ಯಾಸಕರು ಬರುವವರೆಗೆ ಕಾಯಿರಿ!'

★★★

## ಆನೆ ಯಾಕೆ ಬಗ್ಗಿಲ್ಲ!

ಒಬ್ಬಾತ ಕಾಡಿನಲ್ಲಿ ಆನೆಯ ಮೇಲೆ ಕುಳಿತು ಆನಂದದಿಂದ ಪ್ರಕೃತಿ ವೀಕ್ಷಣೆ ಮಾಡುತ್ತಿದ್ದ. ಒಂದು ಮರದ ಕೊಂಬೆ ತಲೆಗೆ ಬಡಿದು ಕೆಳಗೆ ಬಿದ್ದುಬಿಟ್ಟ. ಜತೆಯಲ್ಲಿದ್ದವರು ಅವನನ್ನು ಎಬ್ಬಿಸಿ ಕೇಳಿದ್ರು 'ಅಲ್ಲಯ್ಯಾ, ಕೊಂಬೆ ಅಡ್ಡ ಬಂದಾಗ ತಲೆ ಯಾಕೆ ತಗ್ಗಿಸ್ಲಿಲ್ಲ?'

ಆತ ಉತ್ತರಿಸಿದ 'ಅಯ್ಯೋ, ಆ ಕೊಂಬೆ ಆನೆಗೂ ಕಾಣ್ಸುತ್ತಲ್ಲ, ಅದೇ ಬಗ್ಗುತ್ತೇನೋ ಅಂದ್ಕೊಂಡೆ!'

★★★

ನಿನಗೂ ನಿನ್ನ ಹೊಸ 'ಹಕ್ಕಿ'ಗೂ ಹೊಂದಾಣಿಕೆ ಹೇಗಿದೆ?

ಪರವಾಗಿಲ್ಲ, ಆದ್ರೆ ಮೊನ್ನೆ ಏನಾಯಿತು ಅಂದ್ರೆ ಕಪಾಳಕ್ಕೆ ಬಾಸುಂಡೆ ಬರೋ ಹಾಗೆ ಬಾರಿಸಿ ಆಮೇಲೆ ಸಾರಿ ಕೇಳಿದ್ಳು ಅಷ್ಟೇ.

ಸಂಗ್ರಹ: ಕೆ.ಪಿ. ಸತ್ಯನಾರಾಯಣ